**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**

**ಸಿ ಸಿ ನಂ : 43/2022**

**ಪಿ ಡಬ್ಲ್ಯೂ - 13**

**ಸಿ ಡಬ್ಲ್ಯೂ - 15**

**ದಿಃ 13.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಸುರೇಶ್. ಎಸ್**

**ತಂದೆಯ ಹೆಸರು ಃ ಲೇಟ್ ಎಸ್. ಸಿದ್ದರಾಜು**

**ವಯಸ್ಸು ಃ 54 ವರ್ಷ**

**ಉದ್ಯೋಗ ಃ ಹೆಚ್.ಸಿ. ಬೆಂಗಳೂರು ಮಹಿಳಾ ಪೋಲೀಸ್ ಠಾಣೆ**

**ವಿಳಾಸ ಃ ದೊಡ್ಡಬಳ್ಳಾಪುರ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದಃ**

ನಾನು ಕಳೆದ 5 ವರ್ಷಗಳಿಂದ ಮಹಿಳಾ ಪೋಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ04.04.2021 ರಂದು ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಎನ್.ಸಿ.ಆರ್. ಸಂಖ್ಯೆ 149/2021 ರ ಅಡಿ ದಾಖಲಿಸಿಕೊಂಡು ಹಾಗೂ ಚಾಸಾ-1 ರವರ ಹೇಳಿಕೆಯನ್ನು ದಾಖಲಿಸಿಕೊಂಡೆನು. ನಂತರ ಆರೋಪಿಯನ್ನು ಠಾಣೆಗೆ ಕರೆಸಿ ಆತನ ಹೇಳಿಕೆಯನ್ನು ದಾಖಲಿಸಿಕೊಂಡೆನು. ಸಾಕ್ಷಿಯು ಎನ್.ಸಿ.ಆರ್. ಪ್ರತಿಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಎನ್.ಸಿ.ಆರ್. ಪ್ರತಿಯನ್ನು ನಿಪಿ-12 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ-1 ರವರ ಹೇಳಿಕೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಚಾಸಾ-1 ರವರ ಹೇಳಿಕೆಯನ್ನು ನಿಪಿ-13 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯ ಹೇಳಿಕೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಆರೋಪಿಯ ಹೇಳಿಕೆಯನ್ನು ನಿಪಿ-14 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ.ಜಿ.ವಿ. ವಕೀಲರಿಂದ**

ನಿಪಿ-13 ರಲ್ಲಿ ಯಾವುದೇ ಸಾಕ್ಷಿದಾರರ ಹೆಸರುಗಳನ್ನು ನಮೂದಿಸದೇ ಇದ್ದುದ್ದರಿಂದ ದೂರು ಸುಳ್ಳು

ಎಂದು ಕಂಡುಬಂದಿದ್ದರಿಂದ ಎನ್.ಸಿ.ಆರ್. ನಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಎಂದರೆ ಸಾಕ್ಷಿಯು ಕೌಟುಂಬಿಕ ಪ್ರಕರಣಗಳನ್ನು ಮೊದಲು ಎನ್.ಸಿ.ಆರ್. ನಡಿ ದಾಖಲಿಸಬೇಕು ಹಾಗಾಗಿ ಎನ್.ಸಿ.ಆರ್. ನಡಿ ದಾಖಲಿಸಲಾಗಿದೆ ಎಂದು ನುಡಿಯುತ್ತಾರೆ. ಯಾವುದೇ ಸಾಕ್ಷ್ಯಾಧಾರಗಳು ಕಂಡುಬರದ ಕಾರಣವೇ ಪ್ರಕರಣವನ್ನು ಎನ್.ಸಿ.ಆರ್. ನಡಿ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**